**ಕರ್ನಾಟಕ ಸರ್ಕಾರ**

ಸಂಖ್ಯೆ:ಕಾಶಿಇ:20:ಅ.ಉ.ಗೌ.ಧ:ಆಯವ್ಯಯ:2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:09.02.2017.

**ಸುತ್ತೋಲೆ**

ವಿಷಯ 2016-17 ಸಾಲಿನಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನ ಪಾವತಿ ಮಾಹಿತಿ ನೀಡುವ ಕುರಿತು

****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ, 2016-17ನೇ ಶೈಕ್ಷಣಿಕ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಸಂಭಾವನೆ ಪಾವತಿಸುವ ಸಂಬಂಧ ಜನವರಿ-2017ರ ವರೆಗೆ ಈ ಕಛೇರಿಯಿಂದ ಆಯಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಆದರೆ ಅತಿಥಿ ಉಪನ್ಯಾಸಕರುಗಳಿಗೆ ಗೌರವ ಧನ ಪಾವತಿಯಾಗಿಲ್ಲದಿರುವ ಬಗ್ಗೆ ದೂರುಗಳು ಬಂದಿರುವ ಹಾಗೂ ಅತಿಥಿ ಉಪನ್ಯಾಸಕರುಗಳು ಧರಣಿ ನಡೆಸಿತ್ತಿರುವ ಹಿನ್ನಲೆಯಲ್ಲಿ ಕಾಲೇಜುಗಳಿಗೆ ಜಂಟಿ ನಿರ್ದೇಶಕರುಗಳಿಂದ ಇದುವರೆವಿಗೂ ಸ್ವೀಕೃತವಾಗಿರುವ ಅನುದಾನ, ಪ್ರಾಂಶುಪಾಲರ ಹಂತದಲ್ಲಿ ಇದುವರೆವಿಗೂ ಪಾವತಿ ಮಾಡಿರುವ ಅನುದಾನ ಮತ್ತು ಉಳಿಕೆ ಇರುವ ಅನುದಾನದ ಮೊತ್ತದ ವಿವರಗಳನ್ನು **ಈ ಕೆಳಕಂಡ ನಮೂನೆಯಲ್ಲಿ ದಿನಾಂಕ:10-02-2017ರ ಬೆಳಗ್ಗೆ 11.00 ಗಂಟೆಯೊಳಗೆ ಸಂಬಂಧ ಪಟ್ಟ ಜಂಟಿ ನಿರ್ದೇಶಕರುಗಳಿಗೆ ಸಲ್ಲಿಸಲು ಸೂಚಿಸಿದೆ.** ಸದರಿ ವಿಷಯವನ್ನು ವಿಧಾನ ಪರಿಷತ್ತಿನಲ್ಲಿ ಪ್ರಸ್ತಾಪಿಸಿರುವುದರಿಂದ ಈ ಬಗ್ಗೆ ತುರ್ತಾಗಿ ಮಾಹಿತಿಯನ್ನು ನೀಡುವಂತೆ ಪ್ರಾಂಶುಪಾಲರುಗಳಿಗೆ ಕಟ್ಟುನಿಟ್ಟಾಗಿ ಸೂಚಿಸಲಾಗಿದ್ದು, ತಪ್ಪಿದ್ದಲ್ಲಿ ಸಂಬಂಧಪಟ್ಟವರ ವಿರುದ್ಧ ಶಿಸ್ತುಕ್ರಮಕ್ಕೈಗೊಳ್ಳಲು ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು.

**2016-17ನೇ ಸಾಲಿನಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನ ಪಾವತಿಗೆ ಬಿಡುಗಡೆ ಮಾಡಿರುವ ಅನುದಾನದ ವಿವರ**

| ಕಾಲೇಜಿನ ಹೆಸರು | ಪ್ರಾ.ಕಛೇರಿಯಿಂದ ಬಿಡುಗಡೆ ಮಾಡಿರುವ ಅನುದಾನದ ವಿವರ | | | ಕಾಲೇಜು ಹಂತದಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಪಾವತಿಸಿರುವ ವಿವರ | | | ಉಳಿಕೆ ಅನುದಾನದ ಮೊತ್ತ | ಷರಾ |
|---|---|---|---|---|---|---|---|---|
| | ಅವಧಿ | | | ಅವಧಿ | | | | |
| | ಇಂದ | ವರೆಗೆ | ಅನುದಾನದ ಮೊತ್ತ | ಇಂದ | ವರೆಗೆ | ಪಾವತಿಸಿರುವ ಮೊತ್ತ | | (ಇದುವರೆವಿಗೂ ಗೌರವಧನ ಪಾವತಿಯಾಗದಿದ್ದಲ್ಲಿ ಸ್ಪಷ್ಟವಾದ ಕಾರಣಗಳನ್ನು ಈ ಕಾಲಂನಲ್ಲಿಯೇ ನಮೂದಿಸುವುದು) |

ಕಾಲೇಜು ಶಿಕ್ಷಣ ನಿರ್ದೇಶಕರು 9-2-17

**ಇವರಿಗೆ:**

1. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ
2. ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ – ತಮ್ಮ ಕಛೇರಿ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಂದ ಮೇಲ್ಕಂಡ ಮಾಹಿತಿಯನ್ನು ಪಡೆದು ಕ್ರೋಢೀಕರಿಸಿ ದಿನಾಂಕ:10-02-2017ರ ಮಧ್ಯಾಹ್ನ 1.00 ಒಳಗೆ ತಪ್ಪದೇ ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಲಾಗಿದೆ. (ಇ-ಮೇಲ್ ವಿಳಾಸ dcebang.budget@gmail.com)

Govt.Lettes.docx